## ಕರ್ನಾಟಕವಿಧಾನಪರಿಷತ್ತು

## ಮಾನ್ಯವಿಧಾನಪರಿಷತ್ತುಸದಸ್ಯರಾದಶ್ರೀ. ಸಿ.ಎನ್‌ಮಂಜೇಗೌಡ. ಇವರುನಿಯಮ72ರಡಿಕೋರಿರುವಗಮನಸೆಳೆಯುವಸೂಚನೆಗೆಇಲಾಖೆಯ ಮಾಹಿತಿ.

**ಪ್ರಶ್ನೆ:**

ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಬರುವ ರಾಜ್ಯ ಕಾರ್ಮಿಕ ವಿಮಾ ಆಸ್ಪತ್ರೆಯನ್ನು ರಾಜ್ಯ ಕಾರ್ಮಿಕ ವಿಮಾ ಸೊಸೈಟಿಯನ್ನಾಗಿ ಪರಿವರ್ತಿಸಲು ರಾಜ್ಯ ಸರ್ಕಾರ ದಿನಾಂಕ 27-12-2022ರಂದು ಈಗಾಗಲೇ ಒಂದು ರಾಜ್ಯಪತ್ರವನ್ನು ಹೊರಡಿಸಲಾಗಿದೆ. ಇ.ಎಸ್.ಐ ಪ್ರಾರಂಭವಾಗಿ ಸುಮಾರು 75 ವರ್ಷಗಳು ಕಳೆದಿದ್ದು, ಆಯಾ ರಾಜ್ಯಗಳು ನಿಯಮಗಳ ಪ್ರಕಾರ ವಿಮಾದಾರರಿಗೆ ಮತ್ತು ಅವರ ಕುಟುಂಬವರ್ಗದವರಿಗೆ ಆರೋಗ್ಯ, ಸವಲತ್ತುಗಳನ್ನು ನೀಡಲು ಈ ಕಾಯ್ದೆಯಡಿಲ್ಲಿ ಅವಕಾಶ ನೀಡಿ ಎಲ್ಲಾ ಕಾರ್ಮಿಕರು ಇದರ ಲಾಭವನ್ನು ಪಡೆಯುತ್ತಿದ್ದಾರೆ. ರಾಜ್ಯದಲ್ಲಿ 7 ಇ.ಎಸ್.ಐ. ಆಸ್ಪತ್ರೆಗಳು ಮತ್ತು 114 ಇ.ಎಸ್.ಐ ಚಿಕಿತ್ಸಾಲಯಗಳಿವೆ(ಡಿಸ್ಪೆನ್ಸರಿ) ಇವುಗಳಿವೆ, ರಾಜ್ಯದಲ್ಲಿ 48.75 ಲಕ್ಷ ಇ.ಎಸ್.ಐ. ಕಾರ್ಡುದಾರರಿದ್ದಾರೆ. 7 ಆಸ್ಪತ್ರೆಗಳು, 114 ಚಿಕಿತ್ಸಾಲಯಗಳ ಜತೆಗೆ ಕೇಂದ್ರ ಸರ್ಕಾರದ ಇ.ಎಸ್.ಐ. ನಿಗಮದ ನಿಯಂತ್ರಣದಲ್ಲಿರುವ 3 ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಅವಕಾಶವಿದೆ. ರೋಗಿಗಳಿಗೆ ಉಚಿತವಾಗಿ ವಿತರಿಸುವ ಔಷದಿಗಳಿಗೆ ಮತ್ತು ಸಿಬ್ಬಂದಿ ಆಡಳಿತದ ವೆಚ್ಚವೂ ಸೇರಿದಂತೆ, ಶೇಕಡಾ 85.5 ರಷ್ಟನ್ನು ಕೇಂದ್ರ ಸರ್ಕಾರ ಹಾಗೂ ಶೇಕಡಾ 125ರಷ್ಟನ್ನು ರಾಜ್ಯ ಸರ್ಕಾರ ಕೊಡುತ್ತಿದ್ದು, ಪರಿಣಾಮಕಾರಿಯಾಗಿ ಯೋಜನೆ ಜಾರಿಯಾಗುತ್ತಿದೆ. ಈ ಆಸ್ಪತ್ರೆಗಳಲ್ಲಿ ನುರಿತ ತಜ್ಞವೈದ್ಯರು/ವಿವಿಧ ರೀತಿಯ ಎಲ್ಲಾ ವಿಭಾಗಗಳ ಸ್ಪೆಷಲಿಸ್ಟ್ವೈದ್ಯರು/ ಆಧುನಿಕ ರೀತಿಯ ವೈದ್ಯಕೀಯ ಚಿಕಿತ್ಸೆಗಳು ಸಹ ಈ ಇ.ಎಸ್.ಐ. ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ. ಈ ಆಸ್ಪತ್ರೆಗಳೇನೋ ಆಧುನಿಕ ರೀತಿಯಲ್ಲಿ ನಿರ್ಮಾಣವಾಗಿವೆ. ಆಸ್ಪತ್ರೆಗಳಲ್ಲಿರುವ ವೈದ್ಯಕೀಯ ಉಪಕರಣಗಳು ಕಳೆದ 20 ವರ್ಷಗಳ ಹಿಂದೆ ಅಳವಡಿಸಿದ್ದಾಗಿವೆ. ಇದರ ಬದಲು ಲೇಟೆಸ್ಟ್ ಅತ್ಯಾಧುನಿಕತೆಯ ತಂತ್ರಜ್ಞಾನಗಳಿಂದ ನಿರ್ಮಿಸಲ್ಪಟ್ಟ ವೈದ್ಯಕೀಯ ಉಪಕರಣಗಳನ್ನು ಅಳವಡಿಸಿದಲ್ಲಿ ನುರಿತ ವೈದ್ಯ ತಜ್ಞರಿಂದ ಇನ್ನು ಹೆಚ್ಚಿನ ರೀತಿಯ ವೈದ್ಯಕೀಯ ಚಿಕಿತ್ಸೆಗಳನ್ನು ನೀಡುವ ಅವಕಾಶಗಳು ಇವೆ. ಇದರಿಂದ ರಾಜ್ಯದಲ್ಲಿ 48.75 ಲಕ್ಷ ಇ.ಎಸ್.ಐ. ಕಾರ್ಡುದಾರರ ಕುಟುಂಬಕ್ಕೆ ಖಾಸಗಿ ಆಸ್ಪತ್ರೆಗಳಲ್ಲಿ ದೊರಕುವ ಚಿಕಿತ್ಸೆಗಿಂತ ಹೆಚ್ಚಿನ ರೀತಿಯ ಚಿಕಿತ್ಸೆ ಈ ಇ.ಎಸ್.ಐ. ಆಸ್ಪತ್ರೆಗಳಲ್ಲಿ ದೊರೆಯುತ್ತದೆ. ಕೆಲವು ವರ್ಷಗಳಿಂದೀಚೆಗೆ ಇ.ಎಸ್.ಐ. ಆಸ್ಪತ್ರೆಗಳನ್ನು ಜನಸ್ನೇಹಿಯಾಗಿ ಮಾಡುವುದರ ಜೊತೆಗೆ ಅತಿಹೆಚ್ಚು ಪಾರದರ್ಶಕವಾಗಿಯೂ ಇರುವಂತೆ ನೋಡಿಕೊಳ್ಳಲಾಗಿದೆ. ಖಾಸಗಿ ಆಸ್ಪತ್ರೆಗಳಿಗಿಂತ ಹೆಚ್ಚು ಮೂಲಸೌಕರ್ಯಗಳನ್ನು ಒದಗಿಸಲಾಗಿದೆ. ಕಾರ್ಮಿಕ ರಾಜ್ಯ ವಿಮಾ ಯೋಜನೆ ಸೇವೆಯ ಈ

ಇ.ಎಸ್.ಐ. ಆಸ್ಪತ್ರೆಗಳನ್ನು ಸೊಸೈಟಿಯಾಗಿ ಪರಿವರ್ತಿಸಿ, ಖಾಸಗಿಕರಣಗೊಳಿಸುವುದು ಸರಿಯಲ್ಲ. ಎಲ್ಲಾ ವೃಂದದ ನೌಕರರು ಹಾಗೂ ಇದರ ಫಲಾನುಭವಿಗಳಾದಂತಹ ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳು ಖಾಸಗೀಕರಣ ಮಾಡಲು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಹಾಗೂ ಇಡೀ ವ್ಯವಸ್ಥೆಯಲ್ಲೇ ತಪ್ಪುಗಳಿದರೆ ಅವುಗಳನ್ನು ಸರಿಪಡಿಸಲು ಕ್ರಮವಹಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಈ ವಿಷಯ ಕುರಿತು ಹೆಚ್ಚಿನ ಮುತುವರ್ಜಿ ವಹಿಸುವುದು ಅಗತ್ಯವಾಗಿದೆ. ಇಲ್ಲದಿದ್ದರೆ ಸುಮಾರು 50 ಲಕ್ಷ ಇ.ಎಸ್.ಐ ಕಾರ್ಡುದಾರರ ಕುಟುಂಬದವರು, ಅಗತ್ಯ ವೈದ್ಯಕೀಯ ಚಿಕಿತ್ಸೆ, ಔಷಧಗಳು ಸಿಗದೇ ಇನ್ನು ಹೆಚ್ಚಿನ ದುರಂತಗಳು ಸಂಭವಿಸುವ ಸಾಧ್ಯತೆಗಳಿವೆ ಎಂದು ಕೋರುತ್ತಾ, ದಯಮಾಡಿ ಸರ್ಕಾರ ಕಾರ್ಮಿಕ ರಾಜ್ಯವಿಮಾ ಯೋಜನೆ ಸೇವೆಯನ್ನು ಇ.ಎಸ್.ಐ. ಸೊಸೈಟಿಯಾಗಿ ಪರಿವರ್ತಿಸುವುದನ್ನು ಕೈಬಿಡಬೇಕೆಂದು ಸರ್ಕಾರದ ಮಾನ್ಯ ಕಾರ್ಮಿಕ ಸಚಿವರ ಗಮನ ಸೆಳೆಯುತ್ತೇನೆ.

**ಉತ್ತರ:**

ಕಾರ್ಮಿಕ ರಾಜ್ಯ ವಿಮಾ ಯೋಜನೆಯು ಒಂದು ಸಾಮಾಜಿಕ ಭದ್ರತೆಯ ಪ್ರಮುಖ ಯೋಜನೆಯಾಗಿದ್ದು, ಈ ಯೋಜನೆಯನ್ನು ಪ್ರಥಮವಾಗಿ ದಿನಾಂಕ: 24-02-1952 ರಂದು ಕೈಗಾರಿಕಾ ನಗರವಾದ ದೆಹಲಿ ಹಾಗೂ ಕಾನ್ಪುರದಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯಡಿಯಲ್ಲಿ ಎರಡು ಪ್ರಕಾರವಾದ ಸೇವೆಯನ್ನು ಒದಗಿಸಲಾಗುತ್ತಿದ್ದು, ಅದರಲ್ಲಿ ಒಂದು ವೈದ್ಯಕೀಯ ಸೇವೆಗಳು, ಇನ್ನೊಂದು ವೈದ್ಯಕೀಯೆತರ ಸೇವೆಗಳು. ವೈದ್ಯಕೀಯ ಸೇವೆಯನ್ನು ಕಾರ್ಮಿಕರ ರಾಜ್ಯ ವಿಮಾ ಯೋಜನೆಯ ಮೂಲಕ ವಿಸ್ತರಿಸಲಾಗುತ್ತಿದ್ದು, ಇದು ರಾಜ್ಯ ಸರ್ಕಾರದ ಕಾರ್ಮಿಕ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ವೈದ್ಯಕೀಯೇತರ (ನಗದು) ಸೇವೆಯನ್ನು ಕಾ.ರಾ.ವಿ. ನಿಗಮದ ಮೂಲಕ ವಿಸ್ತರಿಸಲಾಗುತ್ತಿದ್ದು ಇದು ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಈ ಯೋಜನೆಯನ್ನು ಕರ್ನಾಟಕದಲ್ಲಿ ದಿನಾಂಕ : 27-07-1958ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಪ್ರಾರಂಭಿಕ ಅವಧಿಯಲ್ಲಿ 48,000 ವಿಮಾದಾರರಿಗೆ ಒಂದು 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಹಾಗೂ 12 ಕಾ.ರಾ.ವಿ. ಚಿಕಿತ್ಸಾಲಯದ ಮೂಲಕ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಯಿತು, ಹಾಗೂ ಅಂದು ರೂ. 400-00 ಮಾಹೆಯಾನ ವೇತನ ಪಡೆಯುತ್ತಿದ್ದ ಕಾರ್ಮಿಕರನ್ನು ಮಾತ್ರ ಈ ಯೋಜನೆಗೆ ಒಳಪಡಿಸಲಾಯಿತು.

ಕಾರಾವಿ ಯೋಜನೆ 1948 ನೇ ಕಾಯ್ದೆಯ ಫಲಾನುಭವಿಗಳಿಗೆ ಈ ಕೆಳಕಂಡ 7 ಪ್ರಮುಖ ಸೌಲಭ್ಯವನ್ನು ವಿಸ್ತರಿಸುತ್ತಿದೆ.

1) ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯ
2) ಖಾಯಿಲೆ ನಗದು ಸೌಲಭ್ಯ

3) ಮಾತೃತ್ವ ನಗದು ಸೌಲಭ್ಯ
4) ಅಂಗವಿಕಲತೆ ನಗದು ಸೌಲಭ್ಯ
5) ಅವಲಂಬಿತರ ನಗದು ಸೌಲಭ್ಯ
6) ಅಂತ್ಯಸಂಸ್ಕಾರದ ವೆಚ್ಚ
7) ನಿರುದ್ಯೋಗ ಭತ್ಯೆ / (ರಾಜೀವ್ ಗಾಂಧಿ ಶ್ರಮಿಕ್ ಕಲ್ಯಾಣ ಯೋಜನೆ).

ವಿಮಾದಾರರಿಗೆ ಹಾಗೂ ಅವರ ಕುಟುಂಬದವರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಹೊಣೆಗಾರಿಕೆ ರಾಜ್ಯ ಸರ್ಕಾರದ್ದಾಗಿದ್ದು, ಈ ಹೊಣೆಗಾರಿಕೆಯನ್ನು ಕಾರಾವಿ ಯೋಜನೆ ವೈದ್ಯಕೀಯ ಸೇವೆ ಇಲಾಖೆಯ ಮೂಲಕ ಒದಗಿಸಲಾಗುತ್ತಿದೆ.

ರಾಜ್ಯ ಸರ್ಕಾರವು ಕಾ.ರಾ.ವಿ. ನಿಗಮದೊಂದಿಗೆ ಮಾಡಿಕೊಂಡ ಒಪ್ಪಂದದ ಅನುಸಾರ ಇಲಾಖೆಯು ಮಾಡುವ ವೆಚ್ಚ ಕಾರಾವಿ ನಿಗಮದ ಮಿತಿಗೆ ಒಳಪಟ್ಟಿರುತ್ತದೆ ಅದರಲ್ಲಿ 7:8 ಭಾಗವನ್ನು ಕಾರಾವಿ ನಿಗಮವು 1:8 ಭಾಗವನ್ನು ರಾಜ್ಯ ಸರ್ಕಾರವು ಭರಿಸುತ್ತದೆ.

ಪ್ರಸ್ತುತ ಇಲಾಖೆಯು ಕರ್ನಾಟಕದಲ್ಲಿ 29.5 ಲಕ್ಷ ವಿಮಾದಾರರಿಗೆ 120 ಲಕ್ಷ ಅವರ ಕುಟುಂಬ ವರ್ಗದವರಿಗೆ 10 ಕಾ.ರಾ.ವಿ ಆಸ್ಪತ್ರೆ (ಕಾ.ರಾ.ವಿ. ನಿಗಮದ ಮಾದರಿ ಆಸ್ಪತ್ರೆ, ರಾಜಾಜಿನಗರ, ಗುಲ್ಬರ್ಗ ಮತ್ತು ಪೀಣ್ಯ ಒಳಗೊಂಡಂತೆ) 119 ಪೂರ್ಣಕಾಲಿಕ ಕಾ.ರಾ.ವಿ. ಚಿಕಿತ್ಸಾಲಯಗಳು, 02 ರೋಗ ಪತ್ತೆ ಹಚ್ಚುವ ಕೇಂದ್ರ ಮೂಲಕ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಕಾ.ರಾ.ವಿ. ಆಸ್ಪತ್ರೆಗಳಲ್ಲಿ ಲಭ್ಯವಿಲ್ಲದ ಉತ್ಕೃಷ್ಟ ಚಿಕಿತ್ಸೆಗಾಗಿ ಇಲಾಖೆಯು ಹಾಗೂ ಕಾ.ರಾ.ವಿ. ನಿಗಮವು 122 ಖಾಸಗಿ / ಸರ್ಕಾರಿ ಆಸ್ಪತ್ರೆಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದು, ಇದರ ಮೂಲಕ ಉತ್ಕೃಷ್ಟ ವೈದ್ಯಕೀಯ ಸೌಲಭ್ಯವನ್ನು ಒದಗಿಸುತ್ತಿದೆ.

ಈ ಇಲಾಖೆಗೆ ಮಂಜೂರಾತಿಯಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ದರ್ಜೆ | ಮಂಜೂರಾತಿ | ಕಾರ್ಯ ನಿರ್ವಹಿಸುತ್ತಿರುವವರು | ಖಾಲಿ |
|---|---|---|---|---|
| 1 | 'ಎ' – ದರ್ಜೆ | 611 | 388 | 223 |
| 2 | 'ಬಿ' – ದರ್ಜೆ | 24 | 13 | 11 |
| 3 | 'ಸಿ' – ದರ್ಜೆ | 1705 | 757 | 948 |
| 4 | 'ಡಿ' – ದರ್ಜೆ | 851 | 142 | 709 |
| | ಒಟ್ಟು | **3191** | **1293** | **1891** |

ಪ್ರಸ್ತುತ ಇಲಾಖೆಯಲ್ಲಿ ಎಲ್ಲಾ ಕಾ.ರಾ.ವಿ. ಆಸ್ಪತ್ರೆಗಳಲ್ಲಿ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳ ಕೊರತೆ ಇರುತ್ತದೆ ಹಾಗೂ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿಗಳು (ಶುಶ್ರೂಷಕರು, ಫಾರ್ಮಸಿಸ್ಟ್) ಸಿಬ್ಬಂದಿ ವರ್ಗ, ಡಿ-ದರ್ಜೆ ನೌಕರರನ್ನು ಒಳಗೊಂಡಂತೆ ಮಾನವ ಸಂಪನ್ಮೂಲದ ಬಹಳ ಕೊರತೆ ಇರುತ್ತದೆ.

ಇದನ್ನು ಮನಗೊಂಡು ಇ.ಎಸ್.ಐ.ಸಿ.ಯು ಪ್ರತಿ ರಾಜ್ಯದಲ್ಲೂ ಸಹ ಒಂದು ಮಾದರಿ ಆಸ್ಪತ್ರೆಯನ್ನು ತೆರೆದಿರುತ್ತದೆ. ಈ ಆಸ್ಪತ್ರೆಗಳು ಕರ್ನಾಟಕದ ಬೆಂಗಳೂರು ರಾಜಾಜಿನಗರದಲ್ಲಿ ಸುಮಾರು 20 ವರುಷಗಳಿಂದ ನಡೆಸುತ್ತಾ ಬಂದಿರುತ್ತದೆ. ರಾಜಾಜಿನಗರ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಿಗುವ ಸೌಲಭ್ಯಗಳಿಗೆ ಹೋಲಿಸಿದರೆ, ರಾಜ್ಯ ಸರ್ಕಾರ ನಡೆಸುತ್ತಿರುವ ಆಸ್ಪತ್ರೆಗಳಲ್ಲಿ ಸಿಗುವ ಸೌಲಭ್ಯದ ಪ್ರಮಾಣ ಕಡಿಮೆ ಇರುತ್ತದೆ. ಇದು ಇತರೆ ರಾಜ್ಯಗಳಿಗೂ ಸಹ ಅನ್ವಯಿಸುತ್ತದೆ, ಈ ವಿಷಯದ ಬಗ್ಗೆ ಅನೇಕ ಸಂಘ ಸಂಸ್ಥೆಗಳು ಮತ್ತು ಇ.ಎಸ್.ಐ.ಸಿ.ಯು ರಾಜ್ಯ ಸರ್ಕಾರದ ಗಮನ ಸೆಳೆದಿರುತ್ತದೆ. ಇದಕ್ಕೆ ಆರ್ಥಿಕ ಮತ್ತು ಮಾನವ ಸಂಪನ್ಮೂಲದ ಕೊರತೆಯೂ ಕೂಡ ಕಾರಣವಾಗಿರುತ್ತದೆ, ಇದನ್ನು ಮನಗಂಡು ಇ.ಎಸ್.ಐ.ಸಿ. ಕೇಂದ್ರ ಕಛೇರಿಯು ಎಲ್ಲಾ ರಾಜ್ಯಗಳಿಗೆ ಒಂದು ರಾಜ್ಯ ಸ್ವಯತಾ ಸಂಸ್ಥೆ ಅಂದರೆ, ಸೊಸೈಟಿ ಸ್ಥಾಪಿಸಿದಲ್ಲಿ ಶೇ.100ರಷ್ಟು ಖರ್ಚನ್ನು ಭರಿಸುವುದಾಗಿ ತಿಳಿಸಿ, ದಿನಾಂಕ 31-03-2023ರೊಳಗೆ ರಾಜ್ಯ ಸ್ವಯತಾ ಸಂಸ್ಥೆಯನ್ನು ರಚಿಸಬೇಕೆಂದು ಸೂಚಿಸಿರುತ್ತದೆ. ಮುಂದುವರಿದಂತೆ, ಈ ಸ್ವಾಯತ್ತ ಸಂಸ್ಥೆಯನ್ನು ರಚಿಸಿದಲ್ಲಿ ಶೇ.100ರಷ್ಟು ಖರ್ಚು ವೆಚ್ಚವನ್ನು ಭರಿಸುವುದಲ್ಲದೆ ಈ ಹಣವನ್ನು ನೇರವಾಗಿ ಸೊಸೈಟಿಯ ಖಾತೆಗೆ ಜಮಾ ಮಾಡುವುದಾಗಿ ತಿಳಿಸಿರುತ್ತದೆ.

ಪ್ರಸ್ತುತ ಈ ಇಲಾಖೆಯ ವೆಚ್ಚಕ್ಕೆ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯಿಂದ ಆಯವ್ಯಯ ಬಿಡುಗಡೆ ಆಗುತ್ತಿದ್ದು, ಕಳೆದ ವರ್ಷ ಇಲಾಖೆಗೆ 492 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಬಿಡುಗಡೆ ಮಾಡಲಾದ ಮೊತ್ತವನ್ನು ಇಲಾಖೆಯು ವೆಚ್ಚ ಮಾಡಿದ ಮೇಲೆ ಮುಂದಿನ ವರ್ಷ ಕಾರಾವಿ ನಿಗಮದವರು ಆಡಿಟ್ ಮಾಡಿಸಿ, ಆಡಿಟ್ ಸರ್ಟಿಫಿಕೇಷನ್ ಮಾಡಿದ ಮೊತ್ತದಲ್ಲಿ 7/8ನೇ ಭಾಗವನ್ನು ರಾಜ್ಯ ಸರ್ಕಾರಕ್ಕೆ ಕಾ.ರಾ.ವಿ. ನಿಗಮವು ಪುನರ್‌ಭರಣ ಮಾಡುತ್ತದೆ. ಈ ವಿಧಾನದಿಂದ ನಮ್ಮ ಇಲಾಖೆಗೆ ಹಣಕಾಸು ಸೌಲಭ್ಯ ಪಡೆಯಲು ವಿಳಂಬವಾಗಿ ಮಾನವ ಸಂಪನ್ಮೂಲ ಮತ್ತು ಉಪಕರಣಗಳನ್ನು ಅನುಕೂಲಕ್ಕೆ ತಕ್ಕಂತೆ ಮತ್ತು ಅವಶ್ಯಕತೆ ಇದ್ದಾಗ ಪಡೆಯಲು ಖರೀದಿಸಲು ಅಡಚಣೆ ಉಂಟಾಗಿರುತ್ತದೆ. ಈ ಸೊಸೈಟಿ ಆದ ಪಕ್ಷದಲ್ಲಿ ಇ.ಎಸ್.ಐ.ಸಿ.ಯು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಮಧ್ಯ ಪ್ರವೇಶವಿಲ್ಲದೆ ನೇರವಾಗಿ ಸೊಸೈಟಿಯ ಖಾತೆಗೆ ಅನುದಾನವನ್ನು ಬಿಡುಗಡೆ ಮಾಡುತ್ತದೆ. ಇದರಿಂದ ಇಲಾಖೆಗೆ ಹಣಕಾಸಿನ ನೆರವು ಸಕಾಲದಲ್ಲಿ ದೊರೆಯಲಿದೆ.

ಇತ್ತೀಚೆಗೆ ಅಂದರೆ, ದಿನಾಂಕ ಫೆಬ್ರವರಿ 01, 2023ರಂದು ಮಾನ್ಯ ನಿರ್ದೇಶಕರು ಜನರಲ್, ಇ.ಎಸ್.ಐ.ಸಿ.ಯವರು ಮಾರ್ಚ್ 31, 2023ರೊಳಗೆ ಸೊಸೈಟಿ ರಚಿಸಬೇಕೆಂದು ಮತ್ತು ರಚಿಸಿದಲ್ಲಿ ಶೇ.100ರಷ್ಟು ಅನುದಾನವನ್ನು ನೀಡುವುದಾಗಿ ಮಾನ್ಯ ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಮುಖೇನ ಸೂಚಿಸಿರುತ್ತಾರೆ.

ಈ ಸೊಸೈಟಿ ರಚನೆಯಿಂದ ಯಾವುದೇ ತರಹದ ಖಾಸಗೀಕರಣ ಮಾಡಿದಂತಾಗುವುದಿಲ್ಲ. ಮುಂದುವರಿದಂತೆ, ಇಲಾಖೆಯನ್ನು ಸುಗಮವಾಗಿ ನಿರ್ವಹಿಸಲು ಅವಕಾಶವಾಗಿ ಇ.ಎಸ್.ಐ. ನೊಂದಾಯಿತ

ಕಾರ್ಮಿಕರಿಗೆ ಇನ್ನು ಹೆಚ್ಚಿನ ಸೌಲಭ್ಯಗಳನ್ನು ನೀಡಲು ಸೌಲಭ್ಯ ಮತ್ತು ಸವಲತ್ತುಗಳನ್ನು ನೀಡಲು ಸಹಾಯವಾಗುತ್ತದೆ.

ಈ ಇಲಾಖೆ ನೌಕರರಿಗೆ ಯಾವುದೇ ತರಹದ ಸೇವಾ ಅಭದ್ರತೆ ಉಂಟಾಗಲು ಸರ್ಕಾರವು ಅವಕಾಶ ನೀಡುವುದಿಲ್ಲ. ಅವರೆಲ್ಲಾ ಸರ್ಕಾರಿ ನೌಕರರಾಗಿಯೇ ನಿವೃತ್ತಿಯಾಗುವವರೆಗೂ ಮುಂದುವರಿಯುತ್ತಾರೆ ಮತ್ತು ಅವರ ಸಂಬಳ, ಸಾರಿಗೆ ಮತ್ತು ಪಿಂಚಣಿಯು ಈ ಹಿಂದಿನಂತೆಯೇ ಮುಂದುವರೆಯಲಿದ್ದು, ಯಾವುದೇ ತರಹದ ನಷ್ಟವಾಗುವುದಕ್ಕೆ ಅವಕಾಶ ನೀಡುವುದಿಲ್ಲ.

ಕೇಂದ್ರ ಸರ್ಕಾರದ ಮಾರ್ಗಸೂಚಿಯನುಸಾರ ವಿಮಾದಾರರ ಹಿತದೃಷ್ಟಿಯಿಂದ ಪ್ರಸ್ತುತ ಕಾರ್ಮಿಕ ರಾಜ್ಯ ವಿಮಾ ಸೇವೆಗಳ ಇಲಾಖೆಯನ್ನು ಸೊಸೈಟಿಯನ್ನಾಗಿ ಪರಿವರ್ತಿಸಿ, ಸಕಾಲದಲ್ಲಿ ಸಮರ್ಪಕ ಹಾಗೂ ಉತ್ಕೃಷ್ಟ ದರ್ಜೆಯ ಸೇವೆಗಳನ್ನು ಒದಗಿಸಲು ಯೋಜನೆಯನ್ನು ರೂಪಿಸಲಾಗಿದೆ.

**ಕಡತಸಂಖ್ಯೆ: LD-LSI/41/2023**

**(ಅರಬೈಲ್ ಶಿವರಾಂ ಹೆಬ್ಬಾರ್)**
**ಕಾರ್ಮಿಕ ಸಚಿವರು**